## ದಿನಾಂಕ:27–11–2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 7 (138)/2010–11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕರ್ನಲ್ ಎಸ್.ಎಸ್.ಡಿಯೋರಾ, ಕಮಾಂಡಿಂಗ್ ಆಫೀಸರ್, 106, ಇನ್‌ಫೆಂಟ್ರಿ ಬೆಟಾಲಿಯನ್ (ಟಿ.ಎ.), ಪಾರಾ ಪಿನ್ 934306, C/o 56 APO ರವರು ಮನವಿ ಸಲ್ಲಿಸಿ, ತಮ್ಮ ಘಟಕವು ಅಕ್ಟೋಬರ್ 2010ನೇ ಸಾಲಿಗೆ 50 ವರ್ಷಗಳನ್ನು ಪೂರ್ಣಗೊಳಿಸುತ್ತಿದೆ ಎಂದು, ಈ ಸುವರ್ಣ ಮಹೋತ್ಸವ ಆಚರಣೆಗೆ ಪಾಲಿಕೆ ವತಿಯಿಂದ ರೂ.10.00 ಲಕ್ಷಗಳನ್ನು Territorial Army (Bangalore Terriers) Welfare Fund ಗಾಗಿ ಮಂಜೂರು ಮಾಡಲು ಕೋರಿರುತ್ತಾರೆ. ಈ ಮೊತ್ತವನ್ನು ಆಚರಣೆ ದಿನದಂದು ಈ ಘಟಕದ ಹುತಾತ್ಮ ಸೈನಿಕರ ಕುಟುಂಬಗಳಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸುವ, ಮಕ್ಕಳಿಗೆ ವಿದ್ಯಾಭ್ಯಾಸ, ವಿದ್ಯಾರ್ಥಿ ವೇತನ ಒಂದು ಬಾರಿಯ ದಯಾ ಮೊತ್ತ, ಸೈನಿಕ ಕುಟುಂಬಗಳ ಕಲ್ಯಾಣ ಕಾರ್ಯಕ್ರಮಗಳಿಗೆ, ರಜಾ ಕಾಲದ ತರಬೇತಿ ಮತ್ತು ಒಂದು ಬಾರಿಯ ವೈದ್ಯಕೀಯ ಸಹಾಯಧನ ನೀಡಲು ಬಳಸಲಾಗುವುದೆಂದು ತಿಳಿಸಿ, ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಹಾಗೂ ಪಾಲಿಕೆ ಸಭೆಯ ಅವಗಾಹನೆಗೆ ತರುತ್ತಾ, ಪ್ರಸ್ತಾವಿತ ಸೈನಿಕ ದಳದ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, ಪಾಲಿಕೆಯ 2010–11ನೇ ಸಾಲಿನ ಆಯವ್ಯಯ ಅಂದಾಜುಗಳ–24, ಸಂಸ್ಕೃತಿ ಮತ್ತು ಕ್ರೀಡೆ–ಕೊಡುಗೆ ಮತ್ತು ಸಹಾಯನುದಾನ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಮೀಸಲಿರಿಸಲಾಗಿರುವ ರೂ.1000.00 ಲಕ್ಷಗಳ ಅನುದಾನದ ಪೈಕಿ ರೂ.5.00 ಲಕ್ಷಗಳ ಸಹಾಯಧನವನ್ನು 2010–11ನೇ ಸಾಲಿಗೆ ಮಂಜೂರು ಮಾಡುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05–10–2010 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26–10–2010 ರ ನಿರ್ಣಯ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26–10–2010 ರ ನಿರ್ಣಯವನ್ನು ಒಪ್ಪುವುದು".

ಶ್ರೀ.ಗಂಗಭೈರಯ್ಯರವರು, ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:26–10–2010 ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಎನ್.ದಯಾನಂದ್)
ಉಪ ಮಹಾಪೌರರು